OS No: 137/2019
PW : 03

ಸಾಕ್ಷಿಯನ್ನು ದಿಃ **24.08.2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎಸ್.ಪಿ. ವಕೀಲರಿಂದ.

ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ನನ್ನ ಊರು ಜಿಗಜಿವಣಿ. ವಾದಿಯ ಊರು ವಿಜಯಪುರ. 1 ನೇ ಪ್ರತಿವಾದಿಯ ಗಂಡ ಇಂಡಿ ಗ್ರಾಮದವನು ಎಂದರೆ ನಿಜ. ಬಿ.ಕೆ.ಚೌಧರಿ ಇತನು ವಿಜಯಪುರದವನು. 5 ಎಕರೆ ಜಮೀನಿನ ಪೈಕಿ 3 ಎಕರೆ 30 ಗುಂಟೆ ಜಮೀನನ್ನು ವಾದಿ ಖರೀದಿಸಿರುತ್ತಾನೆ. ನಾನು ಪ್ರತಿವಾದಿಗಳನ್ನು ನೋಡಿರುವುದಿಲ್ಲ. ಪ್ರತಿವಾದಿಗಳ ನಡುವೆ ಪಾಲು ವಾಟ್ನಿ ದಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ.678/1 ಆಗಿರುತ್ತದೆ. ನಾನು 3 ಎಕರೆ 30 ಗುಂಟೆಯ ಉತಾರೆ ನೋಡಿರುತ್ತೇನೆ. ಸದರಿ 3 ಎಕರೆ 30 ಗುಂಟೆ ಮಹಾದೇವನ ಹೆಸರಿನಲ್ಲಿದೆ. ನಾನು ಸದರಿ ಉತಾರೆಯನ್ನು 2 ವರ್ಷಗಳ ಹಿಂದೆ ನೋಡಿರುತ್ತೇನೆ. ನನಗೆ ದಾವಾ ಆಸ್ತಿಯ ಚಕ್ಕ ಬಂದಿ ಗೊತ್ತಿದೆ. ಪೂರ್ವಕ್ಕೆ ಕಣ್ಣಿ ಅವರ ಜಮೀನು. ಪಶ್ಚಿಮಕ್ಕೆ ಉಳಿಕೆ ಜಮೀನು, ಉತ್ತರಕ್ಕೆ ಸೈಯ್ಯದ ಅವರ ಜಮೀನು. ದಕ್ಷಿಣಕ್ಕೆ ಮಹಮ್ಮದ ಅವರ ಜಮೀನು. 1 ಎಕರೆ 10 ಗುಂಟೆ ಜಮೀನು ಮಹಾದೇವನ ಹೆಸರಿನಲ್ಲಿ ಉಳಿದಿತ್ತು. 1 ಎಕರೆಗೆ 4 ಲಕ್ಷಗಳಂತೆ ಖರೀದಿ ಪಡೆದುಕೊಂಡಿರುತ್ತಾನೆ. ಮಹಾದೇವನಿಗೆ ಯಾವ ರೀತಿ ಪ್ರಾಪಂಚೀಕ ಅಡಚಣೆ ಇತ್ತು ಅಂತ ನನಗೆ ಗೊತ್ತಿಲ್ಲ. ಮದಾದೇವನಿಗೆ ದುಶ್ಚಟ ಇತ್ತು ಎಂದರೆ ನನಗೆ ಗೊತ್ತಿಲ್ಲ. 11 ಇ ನಕ್ಷೆ ಅರ್ಜಿ ಮಹಾದೇವ ಹಾಕಿರುತ್ತಾನೆ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಮಹಾದೇವ, ನಾನು ಹಾಗೂ ವಾದಿ ಸೇರಿ ಖರೀದಿ ಕರಾರು ಪತ್ರ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮಾತುಕತೆ ವಿಜಯಪುರದಲ್ಲಿ ಆಗಿದ್ದು, ಕರಾರು ಪತ್ರ ಇಂಡಿಯಲ್ಲಿ ಆಗಿರುತ್ತದೆ. ಸದರಿ ಮಾತುಕತೆ ಆದ ಸ್ಥಳದ ಚಕ್ಕಬಂದಿ ಹೇಳಲು ಬರುವುದಿಲ್ಲ. ಮಾತುಕತೆ ವಿಜಯಪುರದಲ್ಲಿ ಆಗಿದೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರ ಆದ ಮೇಲೆ 2015 ರಲ್ಲಿ ಮಹಾದೇವನನ್ನು ನಾನೊಬ್ಬನೆ ಭೇಟ್ಟಿಯಾಗಿರುತ್ತೇನೆ. ಸದರಿ ಖರೀದಿ ಕುರಿತು ಮಾತನಾಡಿರುವುದಿಲ್ಲ. ನಾನು ಮತ್ತು

OS No: 137/2019
PW : 03

ವಾದಿ ಗೆಳೆಯರು ಎಂದರೆ ನಿಜ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ. ಕೇ. ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಇಂಡಿ.